# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಲಯ ದಕ್ಷಿಣ**

**ಬೈರಸಂದ್ರ, ವಾರ್ಡ್ ಸಂಖ್ಯೆ: 169**

**ದಿನಾಂಕ: 06.09.2021 ರಂದು ವಾರ್ಡ್ ಸಂ: 169 ಬೈರಸಂದ್ರ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಭೆ:**

**ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಸೌಮ್ಯ ರೆಡ್ಡಿ | ಮಾನ್ಯ ಶಾಸಕರು, |
| 02 | ಶ್ರೀ ವಾಲೂ ರಾಥೋಡ್ | ಅಧ್ಯಕ್ಷರು |
| 03 | ಶ್ರೀ ಎನ್.ನಾಗರಾಜ್ | ಮಾಜಿ ಸ್ಥಳೀಯ ಪಾಲಿಕೆ ಸದಸ್ಯರು |
| 04 | ಶ್ರೀ ಮಂಜುನಾಥ್ ರೆಡ್ಡಿ | ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ |
| 05 | ಶ್ರೀ ಬಿ.ಎಸ್ ಜಯಶಂಕರ್ | ಸ.ಕಾ.ನಿ.ಅ ಜಯನಗರ ಉಪವಿಭಾಗ |
| 06 | ಶ್ರೀ ಚಂದ್ರಶೇಖರ್ ವಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 07 | ಶ್ರೀಮತಿ ಶಶಿಕಲಾ | ಸ.ಕಾ.ನಿ.ಅ (ಘ.ತ್ಯಾ.ವಿ) ಜಯನಗರ |
| 08 | ಶ್ರೀ ರವೀಂದ್ರ | ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 09 | ಶ್ರೀ ದೇಸಾಯಿ | ಸ.ಕಾ.ನಿ.ಅ, ಬೆಂಗಳೂರು ಜಲ ಮಂಡಳಿ |
| 10 | ಶ್ರೀಮತಿ ದೀಪಿಕಾ | ಸ,.ಅ, ಬೆಂಗಳೂರು ಜಲ ಮಂಡಳಿ |
| 11 | ಶ್ರೀ ಸುನಿಲ್ ಕುಮಾರ್ | ಸ.ಕಾ.ನಿ.ಅ, ಬೆಂಗಳೂರು ಜಲ ಮಂಡಳಿ |
| 12 | ಶ್ರೀ ಶಿವಕುಮಾರ್ | ಸ.ಕಂ.ಅ (ಮಾರುಕಟ್ಟೆ) |
| 13 | ಶ್ರೀ ಮಂಜುನಾಥ್ | ಕಂ.ಪ |
| 14 | ಶ್ರೀ ಹೆಚ್.ಎಸ್.ಜಯಸಿಂಹ | ಸ.ಕಾ.ನಿ.ಅ, (ಬೃಹತ್ ನೀರು ಗಾಲುವೆ) |
| 15 | ಶ್ರೀ ಮೆಹಬೂಬ್ ಖಾನ್ | ಸ.ಅ, (ಬೃಹತ್ ನೀರು ಗಾಲುವೆ) |
| 16 | ಶ್ರೀಮತಿ ಪ್ರೀತಿ | ತಿಲಕ್ ನಗರ ಮಹಿಳಾ ಸಂಘದ ಅಧ್ಯಕ್ಷರು |
| 17 | ಶ್ರೀ ಪರಮೇಶ್ವರನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 18 | ಶ್ರೀ ಬಾಬು ರಾವ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 19 | ಶ್ರೀ ಕೆ.ಭಾಸ್ಕರ್ ರೆಡ್ಡಿ | ನಾಗರೀಕರು |
| 20 | ಶ್ರೀ ಟಿ.ಕೆ.ಪರಮೇಶ್ವರನ್ | ನಾಗರೀಕರು |
| 21 | ಶ್ರೀಮತಿ ಕಾಳಮ್ಮ | ನಾಗರೀಕರು |
| 22 | ಶ್ರೀಮತಿ ಲಕ್ಷ್ಮೀ.ವೈ | ಬೈರಸಂದ್ರ ಮಹಿಳಾ ಸಂಘದ ಅಧ್ಯಕ್ಷರು |
| 23 | ಶ್ರೀ ಮಂಜುನಾಥ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1) ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ 21.08.2021 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.
2) ಶ್ರೀ ನಾಗರಾಜ್ ರವರು ಮಾತನಾಡಿ 8ನೇ ಮುಖ್ಯಸರಸ್ತೆಯಲ್ಲಿ ಕೈಬೃಹತ್ ನೀರು ಗಾಲುವೆಯ ಕಾಮಗಾರಿ ಬಗ್ಗೆ, ಸಕಾನಿಅ (ಬೃಹತ್ ನೀರು ಗಾಲುವೆ) ಮಾತಾನಾಡಿ 04 ದಿನ ಕಾಲಾಕಾಶವನ್ನು ಕೋರಿರುತ್ತಾರೆ.
3) ಎಲ್.ಐ.ಸಿ ಕಾಲೋನಿ ಪಾರ್ಕ್‌ನಲ್ಲಿ ಹಲವಾರು ಆಟಿಕೆಗಳು ಹಾಳಾಗಿದ್ದು, ಅದನ್ನು ದುರಸ್ಥಿಮಾಡುವ ಬಗ್ಗೆ. (ಕ್ರಮ: ಸಕಾನಿಅ (ಯೋಜನೆ ದಕ್ಷಿಣ))
4) ಎಲ್.ಐ.ಸಿ. ಕಾಲೋನಿ 4ನೇ ಮತ್ತು 6ನೇ ಅಡ್ಡರಸ್ತೆಗಳಲ್ಲಿ ಒಳಚರಂಡಿ ಪೈಪ್‌ಗಳನ್ನು ಬದಲಾಯಿಸುವ ಕೋರಿದ್ದು, ಶ್ರೀ ದೇಸಾಯಿ ಸಕಾನಿಅ (ಜಲಮಂಡಳಿ) ರವರು ಮತಾನಾಡಿ, ಅನುದಾನ ಬಂದ ನಂತರ ಪೈಪ್‌ಗಳನ್ನು ಬದಲಾಯಿಸುವುದಾಗಿ ಸಭೆಗೆ ತಿಳಸಿರುತ್ತಾರೆ.
5) 2ನೇ ಕ್ರಾಸ್ ಎಲ್.ಐ.ಸಿ ಕಾಲೋನಿ ಗಿಡಗಳನ್ನು ತೆರೆವುಗೊಳಸುವ ಬಗ್ಗೆ ನಿವಾಸಿಗಳು ಕೋರಿರುತ್ತಾರೆ. ಮಾನ್ಯ ಶಾಸಕರು ಮಾತನಾಡಿ ಸ್ವಚ್ಚತಾ ಕಾರ್ಯಾಕ್ರಮ ಹಮ್ಮಿಕೊಂಡು ತೆರೆವುಗೊಳಸಲು ತಿಳಸಿರುತ್ತಾರೆ.
6) ಶ್ರೀಮತಿ ಶಶಿಕಲ, ಸಕಾನಿಅ(ಘ.ತ್ಯಾ.ವಿ) ರವರು ಮಾತಾನಾಡಿ, ಬೆಸ್ಕಾಂ ರವರು ಮರದ ರೆಂಬೆಗಳನ್ನು ಕತ್ತರಿಸಿ ಅದನ್ನು ತೆರೆವುಗೊಳಸದೆ ಇರುವ ತಿಳಸಿರುತ್ತಾರೆ.
7) ಶ್ರೀಮತಿ ಪ್ರೀತಿರವರು ಮಾತನಾಡಿ ಹಳೆಯ ಕಸದ ತಳ್ಳುವ ಗಾಡಿಗಳನ್ನು ತೆರೆವುಗೊಳಸದೆ ಇರುವುದರಿಂದ , ನಿವಾಸಿಗಳು ಅಲ್ಲಿ ಕಸವನ್ನು ತಂದು ಹಾಕಿತ್ತಿರುವ ಬಗ್ಗೆ ತಿಳಸಿರುತ್ತಾರೆ ಹಾಗೂ ಮಾಂಸ ಮಾರಟ ಮಾಡುವ ಅಂಗಡಿಗಳಗೆ ನೋಟೀಸ್ ನೀಡಲು ಕೋರಿರುತ್ತಾರೆ.
8) ಕಾಂಪೋಸ್ಟ್ ಸಂತೆ ಮಾಡವಂತೆ ಮಾನ್ಯ ಶಾಸಕರು ಸೂಚಿಸಿರುತ್ತಾರೆ.
9) ಎಲ್.ಐ.ಸಿ ಕಾಲೋನಿ ಉದ್ಯಾನವನನ್ನು ನಿರ್ವಹಿಸಲು ಕೋರಿರುತ್ತಾರೆ.
10) ಕೋವಿಡ್ ವ್ಯಾಕ್ಸಿನ್‌ನ್ನು ಪಾಲಿಕೆ ವಾಣಿಜ್ಯ ಸಂಕೀರ್ಣದಲ್ಲಿ ಶಾಶ್ವತವಾಗಿ ನಡೆಸಲು ಕೋರಿರುತ್ತಾರೆ.
11) ಚಿನ್ನದ ಸರ ಮತ್ತು ಮೊಬೈಲ್‌ನ್ನು ಕಳ್ಳತನ ಮಾಡುತ್ತಿದ್ದು ಇದರ ಬಗ್ಗೆ ಸೂಕ್ತ ಕ್ರಮ ಕೈಗೂಳ್ಳು ಮಾನ್ಯ ಶಾಸಕರು, ತಿಲಕ್‌ನಗರ ಪೋಲೀಸ್ ಠಾಣ ನಿರಿಕ್ಷಕರಿಗೆ ಸೂಚಿಸಿದರು.

12) ಕೋವಿಡ್ ವ್ಯಾಕ್ಸಿನ್‌ಗೆ ಸೇರಿಯಾದ ಸಮಯ ನಿಗಧಿಪಡಿಸಲು ಹಾಗೂ ವಯೋವೃದ್ಧರಿಗೆ ಮತ್ತು ಅಂಗವಿಕಲರಿಗೆ ಮನೆ-ಮನೆಗೆ ತರೆಳ ವ್ಯಾಕ್ಸಿನ್ ನೀಡಲು ಕ್ರಮ ಕೈಗೂಳ್ಳುಲು ಕೋರಿರುತ್ತಾರೆ.

13) ಎಲ್.ಐ.ಸಿ.ಕಾಲೋನಿ ಹಾಲಿನ ಮಳಿಗೆ ಪಕ್ಕ ಇರುವ transformer ಸುತ್ತಾ ಬೆಳೆದಿರುವ ಗಿಡಗಳನ್ನು ತೆರೆವುಗೋಳಿಸಿಕೊಡುವಂತೆ ಶ್ರೀ ಬಾಬುರಾವ್ ರವರು ಕೋರಿದರು. (ಕ್ರಮ ಸ.ಅ ಕಾಮಗಾರಿ ಇಲಾಖೆ).

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು. ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಗೆ ಹಾಗೂ ಪಾಲಿಕೆ ಅಧಿಕಾರಿಗಳಗೆ ವಂದಾನಾರ್ಪಣೆ ತಿಳಿಸುತ್ತಾ ದಿ: 22.09.2021ರಂದು ಬೆಳ್ಳಗೆ 11.00ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು .

**ಕಾರ್ಯದರ್ಶಿ ಮತ್ತು ಸಂಚಾಲಕರು**
**ಹೆಸರು: ವಿ. ಚಂದ್ರಶೇಖರ್**
**ಸಹಾಯಕ ಅಭಿಯಂತರರು**